**Q.P. Code – 56601**

# ಪ್ರಥಮ ಎಂ.ಎ. ಪದವಿ ಪರೀಕ್ಷೆ

## ಸೆಪ್ಟೆಂಬರ್/ಅಕ್ಟೋಬರ್ 2013

## (ದೂರ ಶಿಕ್ಷಣ)

## ಕನ್ನಡ

## (DPA 510) ಪತ್ರಿಕೆ 1.1 – ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯ

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆಗಳು :*** *1) ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ.*

*2) ಎಲ್ಲಾ ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

1. ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ದೊರೆತ ರಾಜಾಶ್ರಯದ ಹಿನ್ನೆಲೆಗಳನ್ನು ಕುರಿತು ಚರ್ಚಿಸಿ.

2. ವಚನ ಚಳುವಳಿಯ ಮುಖ್ಯ ಉದ್ದೇಶಗಳನ್ನು ಸ್ಪಷ್ಟಪಡಿಸಿ.

3. ಭೋಗ ಮತ್ತು ಸಾವಿನ ಚಿತ್ರಣ ವಜ್ರಜಂಘ – ಶ್ರೀಮತಿಯ ಪ್ರಸಂಗದಲ್ಲಿ ಹೇಗೆ ವ್ಯಕ್ತಗೊಂಡಿದೆ? ವಿವರಿಸಿ.

4. 'ನೀಲಾಂಜನೆಯ ನೃತ್ಯ' ವೃಷಭನಾಥನಲ್ಲಿ ಉಂಟು ಮಾಡಿದ ಪರಿಣಾಮಗಳನ್ನು ವಿಶದಪಡಿಸಿ.

5. ಅಕ್ಕಮಹಾದೇವಿ ವಚನಗಳಲ್ಲಿನ 'ಶರಣಸತಿ – ಲಿಂಗಪತಿ' ಭಾವವನ್ನು ಗುರುತಿಸಿ.

6. 'ಧನ ಕೀರ್ತಿ ಕುಮಾರನ ಕತೆ'ಯ ಸ್ವಾರಸ್ಯವನ್ನು ವಿವರಿಸಿ.

7. 'ವಿದ್ಯುಚ್ಚೋರ ರಿಸಿಯ ಕತೆ'ಯ ಸಾಮಾಜಿಕ ನೆಲೆಗಳನ್ನು ಕುರಿತು ವಿವೇಚಿಸಿ.

8. ಕುಮಾರವ್ಯಾಸನ ರೂಪಕ ರಚನಾ ಸಾಮರ್ಥ್ಯವನ್ನು ಉದಾಹರಣೆಗಳೊಂದಿಗೆ ಚರ್ಚಿಸಿ.

9. 'ರಾಮಧಾನ್ಯ ಚರಿತೆ' ವರ್ಗ ಸಂಘರ್ಷದ ಕತೆಯೆ? ವಿಚಾರ ಮಾಡಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತ

    (ಆ) ಆಗಮಿಕ–ಲೌಕಿಕ ಕಾವ್ಯ ಪರಂಪರೆ

    (ಇ) ಪಂಪನ ಜೀವನ ವೃತ್ತಾಂತ

    (ಈ) ಭರತ–ಬಾಹುಬಲಿ ವ್ಯಾಯೋಗ

    (ಉ) ನಯಸೇನ

    (ಊ) ಅಕ್ಕಮಹಾದೇವಿಯ ವಚನಗಳಲ್ಲಿ ಪ್ರಕೃತಿ

    (ಎ) ಸಂಜಯ

    (ಏ) 'ರಾಮಧಾನ್ಯ ಚರಿತೆ'ಯ ಭಾಷೆ

**Q.P. Code – 56602**

# ಪ್ರಥಮ ಎಂ.ಎ. ಪದವಿ ಪರೀಕ್ಷೆ

## ಸೆಪ್ಟೆಂಬರ್/ಅಕ್ಟೋಬರ್ 2013

## (ದೂರ ಶಿಕ್ಷಣ)

## ಕನ್ನಡ

## (DPA 520) ಪತ್ರಿಕೆ 1.2 – ಭಾಷಾ ವಿಜ್ಞಾನ ಮತ್ತು ಛಂದಸ್ಸು

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆಗಳು :*** *1) ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

*2) ಎಲ್ಲಾ ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

1. ಭಾಷೆ ಎಂದರೇನು? ವಿವಿಧ ವಿದ್ವಾಂಸರ ವ್ಯಾಖ್ಯಾನಗಳನ್ನು ವಿಶ್ಲೇಷಿಸಿ.

2. ಧ್ವನಿ ಎಂದರೇನು? ಧ್ವನ್ಯಾಂಗಗಳ ಕಾರ್ಯವನ್ನು ವಿವರಿಸಿ.

3. ಭಾಷೆ ಮತ್ತು ಸಮೂಹ ಮಾಧ್ಯಮಗಳ ಸಂಬಂಧವನ್ನು ಬರೆಯಿರಿ.

4. ಕನ್ನಡ ಭಾಷೆಯ ಸಮಕಾಲೀನ ಸಮಸ್ಯೆಗಳನ್ನು ಚರ್ಚಿಸಿ.

5. ಛಂದಸ್ಸು ಎಂದರೇನು? ಛಂದಸ್ಸಿನ ನಿಷ್ಪತ್ತಿಯನ್ನು ಬರೆಯಿರಿ.

6. ರಗಳೆಯ ಪ್ರಭೇದಗಳನ್ನು ಉದಾಹರಣೆ ಸಹಿತ ವಿವರಿಸಿ.

7. ಮಾತ್ರಾ ಷಟ್ಪದಿಗಳಾವುವು? ಎರಡರ ಲಕ್ಷಣಗಳನ್ನು ಉದಾಹರಣೆ ಸಹಿತ ನಿರೂಪಿಸಿ.

8. ಮಹಾ ಛಂದಸ್ಸಿನ ವೈಶಿಷ್ಟ್ಯವನ್ನು ವಿವರಿಸಿ.

9. ಮುಕ್ತ ಛಂದಸ್ಸಿನ ಲಕ್ಷಣವನ್ನು ಸೋದಾಹರಣವಾಗಿ ಬರೆಯಿರಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಉಪಭಾಷೆ

    (ಆ) ಭಾಷಾ ಪ್ರಮಾಣೀಕರಣ

    (ಇ) ದ್ವಿಭಾಷಿಕತೆ

    (ಈ) ಛಂದಸ್ಸಿನ ಪ್ರಯೋಜನ

    (ಉ) ಸಾಂಗತ್ಯ

    (ಊ) ಚಂಪಕಮಾಲಾ ವೃತ್ತ

    (ಎ) ದ್ರಾವಿಡ ಭಾಷೆಗಳಲ್ಲಿ ಲಿಂಗ ವ್ಯವಸ್ಥೆ

    (ಏ) ಮುಡಿ–ಪದ್ಮಗಣ

**Q.P. Code – 56603**

**ಪ್ರಥಮ ಎಂ.ಎ. ಪದವಿ ಪರೀಕ್ಷೆ**

**ಸೆಪ್ಟೆಂಬರ್/ಅಕ್ಟೋಬರ್ 2013**

**(ದೂರ ಶಿಕ್ಷಣ)**

**ಕನ್ನಡ**

**(DPA 530) ಪತ್ರಿಕೆ 1.3 – ಕನ್ನಡ ಸಾಹಿತ್ಯದ ಹಿನ್ನೆಲೆ, ಪ್ರೇರಣೆ, ಪ್ರಭಾವಗಳು**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆಗಳು :*** *1) ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

*2) ಎಲ್ಲಾ ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

1. ಪ್ರಾಚೀನ ಕನ್ನಡ ಸಾಹಿತ್ಯದ ಮೇಲೆ ಧರ್ಮವು ಬೀರಿರುವ ಪ್ರಭಾವವನ್ನು ವಿವರಿಸಿ.

2. ದೇಸಿ ಮತ್ತು ಮಾರ್ಗಗಳ ಸಂಬಂಧಾಂತರವನ್ನು ಪ್ರಾಚೀನ ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ವಿವೇಚಿಸಿ.

3. ಪಂಪ ಭಾರತದ ವಿಶಿಷ್ಟತೆಯನ್ನು ನಿರೂಪಿಸಿ.

4. ಕನ್ನಡ ಸಾಹಿತ್ಯದ ಮೇಲೆ ಜೈನ ಧರ್ಮವು ಬೀರಿರುವ ಪ್ರಭಾವವನ್ನು ಸೋದಾಹರಣವಾಗಿ ಚರ್ಚಿಸಿ.

5. ವಚನ ಚಳುವಳಿಯ ಮಹತ್ವವನ್ನು ವಿವೇಚಿಸಿ.

6. ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಇಂಗ್ಲಿಷ್ ಸಾಹಿತ್ಯವು ಬೀರಿರುವ ಪ್ರಭಾವವನ್ನು ವಿಶದೀಕರಿಸಿ.

7. ನವ್ಯ ಸಾಹಿತ್ಯದ ಹಿನ್ನೆಲೆಯನ್ನು ವಿವರಿಸಿ.

8. ಪ್ರಗತಿ ಶೀಲ ಸಾಹಿತ್ಯದ ವಿಶಿಷ್ಟತೆಗಳನ್ನು ಚರ್ಚಿಸಿ.

9. ದಲಿತ–ಬಂಡಾಯ ಸಾಹಿತ್ಯಕ್ಕೆ ಉಂಟಾಗಿರುವ ಪ್ರೇರಣೆ, ಪ್ರಭಾವಗಳನ್ನು ವಿಶ್ಲೇಷಿಸಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಆದಿಪುರಾಣ

    (ಆ) ರನ್ನ

    (ಇ) ಚಂಪೂ

    (ಈ) ರಗಳೆ

    (ಉ) ಸಂಕೇತವಾದ

    (ಊ) ಲೋಹಿಯಾವಾದ

    (ಎ) ಮಹಾಭಾರತ

    (ಏ) ಕರ್ನಾಟಕದ ಏಕೀಕರಣ

**Q.P. Code – 56604**

**ಪ್ರಥಮ ಎಂ.ಎ. ಪದವಿ ಪರೀಕ್ಷೆ**

**ಸೆಪ್ಟೆಂಬರ್/ಆಕ್ಟೋಬರ್ 2013**

**(ದೂರ ಶಿಕ್ಷಣ)**

**ಕನ್ನಡ**

**(DPA 540) ಪತ್ರಿಕೆ 1.4.1 – ಜಾನಪದ ವಿಜ್ಞಾನ : ಮೂಲತತ್ವಗಳು ಮತ್ತು ಪ್ರಕಾರಗಳು**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆಗಳು :*** *1) ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

*2) ಎಲ್ಲಾ ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

1. ಜಾನಪದ ಅಧ್ಯಯನದ ಇತಿಹಾಸವನ್ನು ಕುರಿತು ಬರೆಯಿರಿ.
2. 'ಜಾನಪದ ಅಧ್ಯಯನದಲ್ಲಿ ವರ್ಗೀಕರಣ ಮಹತ್ವದ ಸಂಗತಿಯಾಗಿದೆ' ಎಂಬುದನ್ನು ವಿವಿಧ ವಿದ್ವಾಂಸರ ವರ್ಗೀಕರಣದ ಹಿನ್ನೆಲೆಯಲ್ಲಿ ವಿವೇಚಿಸಿ.
3. ಜಾನಪದ ಕ್ಷೇತ್ರ ಕಾರ್ಯದಲ್ಲಿ ಅನುಸರಿಸಬೇಕಾದ ವಿಧಾನ ಮತ್ತು ಯೋಜನೆಗಳನ್ನು ಕುರಿತು ಬರೆಯಿರಿ.
4. "ಧರ್ಮ, ಇತಿಹಾಸ, ಮಾನವಶಾಸ್ತ್ರ, ಭಾಷಾಶಾಸ್ತ್ರ ಶಿಸ್ತುಗಳೊಂದಿಗೆ ಜಾನಪದದ ಬೇರುಗಳು ಹೆಣೆದುಕೊಂಡಿವೆ" – ವಿಶ್ಲೇಷಿಸಿ.
5. 'ಗಾದೆಗಳು ಅನುಭವವನ್ನು ಹೇಳಿದರೆ, ಒಗಟುಗಳು ಬುದ್ಧಿ ಕೌಶಲ್ಯವನ್ನು ಸಾರುತ್ತವೆ' – ಉದಾಹರಣೆಗಳೊಂದಿಗೆ ವಿವರಿಸಿ.
6. 'ಆದಿ ಮಾನವನಿಂದ ಆಧುನಿಕ ಮಾನವನವರೆಗೆ ನಂಬಿಕೆ ಮತ್ತು ಸಂಪ್ರದಾಯಗಳು ಮನೆ ಮಾಡಿಕೊಂಡಿವೆ' – ವಿಶ್ಲೇಷಿಸಿ.
7. ಜನಪದ ರಂಗ ಕಲೆಗಳ ಸ್ವರೂಪವನ್ನು ಕುರಿತು ಬರೆಯಿರಿ.
8. ಕರ್ನಾಟಕದ ಜನಪದ ಮನರಂಜಕರನ್ನು ಕುರಿತು ಬರೆಯಿರಿ.
9. ಭೌತಿಕ ಜಾನಪದದಲ್ಲಿ ಅತ್ಯಂತ ಪ್ರಮುಖವಾಗಿರುವ ಜಾನಪದ ವಸ್ತು ಸಂಗ್ರಹಾಲಯವನ್ನು ಕುರಿತು ಬರೆಯಿರಿ.
10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಜಾನಪದ ಮತ್ತು ಪುರಾಣ

    (ಆ) ಜಾನಪದ ಕೃಷಿ ವಿಜ್ಞಾನ

    (ಇ) ಪುರವಂತರ ಮೇಳ

    (ಈ) ಯಕ್ಷಗಾನ ಬಯಲಾಟಗಳು

    (ಉ) 'ಹಂಚಿ ಉಂಡರೆ ಹಸಿವಿಲ್ಲ' – ವಿಶ್ಲೇಷಿಸಿ

    (ಊ) ಜನಪದ ಕತೆಗಳು

    (ಎ) ಜಾತ್ರೆ

    (ಏ) ಆರ್.ಎಸ್. ಬಾಗ್ಸ್

**Q.P. Code – 56605**

**ಪ್ರಥಮ ಎಂ.ಎ. ಪದವಿ ಪರೀಕ್ಷೆ**

**ಸೆಪ್ಟೆಂಬರ್/ಅಕ್ಟೋಬರ್ 2013**

**(ದೂರ ಶಿಕ್ಷಣ)**

**ಕನ್ನಡ**

**(DPA 550) ಪತ್ರಿಕೆ 1.4.2 – ಆಧುನಿಕ ಕನ್ನಡ ಸಾಹಿತ್ಯ : ಕಾವ್ಯ ಮತ್ತು ನಾಟಕ**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆಗಳು :*** *1) ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

*2) ಎಲ್ಲಾ ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

1. ಆಧುನಿಕ ಕನ್ನಡ ಕಾವ್ಯದ ಸ್ವರೂಪ ಲಕ್ಷಣ ಕುರಿತು ವಿವರಿಸಿರಿ.

2. ನವೋದಯ ಕಾವ್ಯದ ಲಕ್ಷಣಗಳನ್ನು ಕುರಿತು ಚರ್ಚಿಸಿರಿ.

3. ನವ್ಯ ಕಾವ್ಯ ಎಂದರೇನು? ಅದರ ಸ್ವರೂಪ ಮತ್ತು ಇತಿಹಾಸವನ್ನು ಕುರಿತು ಚರ್ಚಿಸಿರಿ.

4. ದಲಿತ–ಬಂಡಾಯ ಕಾವ್ಯದ ಸಾಮಾಜಿಕ ಕಾಳಜಿಗಳನ್ನು ಕುರಿತು ಉದಾಹರಣೆ ಸಹಿತವಾಗಿ ವಿವರಿಸಿರಿ.

5. ಅಯೋಧ್ಯಾ ಸಂಪುಟದ ಮಹತ್ವ ಚರ್ಚಿಸಿರಿ.

6. ಕೆ.ಎಸ್. ನರಸಿಂಹಸ್ವಾಮಿಯವರ ಕಾವ್ಯದ ವಿಶಿಷ್ಟತೆಯನ್ನು ವಿವರಿಸಿರಿ.

7. ಸಾವಿರಾರು ನದಿಗಳು ಸಂಕಲನದ ಪ್ರತಿಭಟನೆಯ ನೆಲೆಗಳನ್ನು ಚರ್ಚಿಸಿರಿ.

8. ಕೈಲಾಸಂ ಅವರ ಟೊಳ್ಳುಗಟ್ಟಿ ನಾಟಕದ ವಿಡಂಬನೆಯ ಕುರಿತು ಪರಿಶೀಲಿಸಿರಿ.

9. ಪು.ತಿ.ನ. ಅವರ ಅಹಲ್ಯೆ ನಾಟಕದಲ್ಲಿನ ವಸ್ತುವನ್ನು ಕುರಿತು ವಿವರಿಸಿರಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

(ಅ) ನವೋದಯ

(ಆ) ಮಂಥರೆ

(ಇ) ಕೆ.ಎಸ್. ನರಸಿಂಹ ಸ್ವಾಮಿ

(ಈ) ಗಿರೀಶ ಕಾರ್ನಾಡ

(ಉ) ಬಂಡಾಯ

(ಊ) ಸಿದ್ಧಲಿಂಗಯ್ಯ

(ಎ) ಇಂದ್ರ

(ಏ) ಯವಕ್ರೀತ